

# ಚಾಂದ್ ಬಾವಡಿ

## ಮೆಟ್ಟಿಲು ಬಾವಿಯಲ್ಲಿ ಇತಿಹಾಸದ ನೆರಳು

**ಜಗತ್ತಿನ ಅತಿ ದೊಡ್ಡ ಮೆಟ್ಟಿಲು ಬಾವಿಯೆಂದೇ ಕರೆಸಿಕೊಂಡಿರುವ 'ಚಾಂದ್ ಬಾವಡಿ', ಇತಿಹಾಸದೊಂದಿಗೆ ಕಲಾ ಕುಶಲತೆಯಿಂದಲೂ ಗಮನ ಸೆಳೆಯುತ್ತದೆ. ಕುಸುರಿ ಕೆತ್ತನೆಗಳ ಚಿತ್ತಾಕರ್ಷಕ ಮೆಟ್ಟಿಲುಗಳು ಮಂತ್ರಮುಗ್ಧಗೊಳಿಸುತ್ತವೆ.**

**■ ಶೇಖರ್ ಗೌಳೇರ್**

ಐತಿಹಾಸಿಕ ಕೋಟೆ ಕೊತ್ತಲಗಳ ನಾಡಾಗಿರುವ ರಾಜಸ್ಥಾನದಲ್ಲಿ, ನೋಡಲೇಬೇಕಾದ ಸ್ಥಳಗಳಲ್ಲಿ 'ಚಾಂದ್ ಬಾವಡಿ' ಕೂಡ ಒಂದೆನ್ನಬಹುದು.

ರಾಜಸ್ಥಾನಕ್ಕೆ ಪ್ರವಾಸಕ್ಕೆ ತೆರಳಿದ್ದ ನಾನು, ನನ್ನ ಪತ್ನಿ ಹಲವು ಸ್ಥಳಗಳನ್ನು ನೋಡಿಕೊಂಡು ಜೈಪುರದಲ್ಲಿ ಉಳಿದುಕೊಂಡೆವು. ನಾವು ತಂಗಿದ್ದ ಪಂಚಾಯತ್ ಧರ್ಮಶಾಲೆಯ ವ್ಯವಸ್ಥಾಪಕರು, ಅಲ್ಲಿಂದ 85 ಕಿ.ಮೀ. ದೂರದಲ್ಲಿರುವ 'ಚಾಂದ್ ಬಾವಡಿ' ನೋಡಲೇಬೇಕಾದ ಅದ್ಭುತ ಜಾಗವೆಂದು ವರ್ಣಿಸಿದರು. ಅವರ ವರ್ಣನೆಗೆ ಮನಸೋತು, ಆ ವಿಶೇಷ ಸ್ಥಳವನ್ನು ನೋಡಬೇಕೆಂದು ನಿಶ್ಚಯಿಸಿದೆವು.

ಜೈಪುರದಿಂದ ಆಗ್ರಾಕ್ಕೆ ಬಸ್ ಹತ್ತಿ ಸಿಕಂದರ್‌ನಲ್ಲಿ ಇಳಿದು ಆಟೊ ಏರಿ ಚಾಂದ್ ಬಾವಡಿಯತ್ತ ಪಯಣ ಬೆಳೆಸಿದೆವು. ಅಭನೇರಿ ಊರು ತಲುಪಿದಾಗ ಬೆಳಿಗ್ಗೆ 9. ಅಲ್ಲಿ ಇಳಿದ ಕೂಡಲೇ ಹರ್ಷತ್ ಮಾತಾ ದೇವಸ್ಥಾನದ ದರ್ಶನವಾಯಿತು. ಚಾಂದ್ ಬಾವಡಿ, ಆ ದೇವಸ್ಥಾನದ ಪೂರ್ವಕ್ಕೆ 100 ಮೀಟರ್ ದೂರದಲ್ಲಿತ್ತು.

ಹಸುರು ಆವರಣ ಪ್ರವೇಶಿಸಿದ ನಂತರ ಕಾಣುವ ಚಾಂದ್ ಬಾವಡಿ ನೋಡುತ್ತಿದ್ದರೆ ಅಚ್ಚರಿಯ

